# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ರಾಜ್ಯದಲ್ಲಿನ ಎಲ್ಲಾ ಮಕ್ಕಳಿಗೆ ಕೋವಿಡ್-19ರ ಹಿನ್ನೆಲೆಯಲ್ಲಿ ಶಾಲೆಗಳು ತೆರೆಯದಿರುವುದರಿಂದ ವಿದ್ಯಾಗಮ ಕಾರ್ಯಕ್ರಮವನ್ನು ಪುನರಾರಂಭಿಸಲು ರೂಪುರೇಷೆಗಳನ್ನು ನಿಗದಿಪಡಿಸುವ ಬಗ್ಗೆ.**

**ಓದಲಾಗಿದೆ:** 1) ಘನ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾದ WP 11708/2020 (EDN-RES-PIL) ಕುರಿತು ದಿ:4-12-2020 ರಂದು ನೀಡಿರುವ ಮಧ್ಯಂತರ ಆದೇಶ.

2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಏಕ ಕಡತ ಸಂಖ್ಯೆ:ಸಿ4(6)/ಸ.ಪ್ರೌ.ಶ/ವಿ.ಕಾ 22/2020-21, ದಿನಾಂಕ:11.12.2020.

***

**ಪ್ರಸ್ತಾವನೆ:**

ಮೇಲೆ ಓದಲಾದ (2)ರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಏಕ ಕಡತದಲ್ಲಿ ರಾಜ್ಯದಲ್ಲಿನ ಎಲ್ಲಾ ಮಕ್ಕಳಿಗೆ ಕೋವಿಡ್-19ರ ಹಿನ್ನೆಲೆಯಲ್ಲಿ ಶಾಲೆಗಳು ತೆರೆಯದಿರುವುದರಿಂದ ವಿದ್ಯಾಗಮ ಕಾರ್ಯಕ್ರಮವನ್ನು ಪುನರಾರಂಭಿಸಲು ರೂಪುರೇಷೆಗಳನ್ನು ನಿಗದಿಪಡಿಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಕೋವಿಡ್-19 ಹಿನ್ನೆಲೆಯಲ್ಲಿ ವಿದ್ಯಾಗಮ ಕಾರ್ಯಕ್ರಮವನ್ನು "ಪ್ರತೀ ಮಗುವಿನ/ವಿದ್ಯಾರ್ಥಿಯ ಕನಸಿಗೆ ಯಾವುದೇ ನೈಸರ್ಗಿಕ ವಿಕೋಪ, ಮಹಾಮಾರಿ ಅಥವಾ ಇನ್ನಾವುದೇ ಅಡಚಣೆಗಳು ಅಡ್ಡಿಯಾಗದಂತೆ ನನಸಾಗಿಸುವುದು" ಎಂಬ ದೂರದೃಷ್ಟಿಯೊಂದಿಗೆ ದಿನಾಂಕ: 04.08.2020ರಿಂದ ಪ್ರಾರಂಭಿಸಲಾಗಿತ್ತು.

ಕೋವಿಡ್-19 ಹಿನ್ನೆಲೆಯಲ್ಲಿ ಶಾಲೆಗಳು ಮುಚ್ಚಿರುವ ಸಂದರ್ಭದಲ್ಲಿಯೂ ಮಕ್ಕಳ ನಿರಂತರ ಕಲಿಕಾ ಪ್ರಕ್ರಿಯೆ ಮುಂದುವರೆಸುವುದು. ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಂಪರ್ಕವನ್ನು ಮುಂದುವರೆಸುವುದು. ಮಕ್ಕಳ ಮನೋಸ್ಥೈರ್ಯ ವೃದ್ಧಿಸುವುದು, ಬಾಲಕಾರ್ಮಿಕ, ಬಾಲ್ಯ ವಿವಾಹ ಮುಂತಾದ ಪಿಡುಗುಗಳಿಗೆ ಮಕ್ಕಳು ಒಳಪಡುವುದನ್ನು ತಡೆಗಟ್ಟುವುದು ಹಾಗೂ ಮಕ್ಕಳು ಶಾಲೆಯಿಂದ ಹೊರಗುಳಿಯದಂತೆ ಖಚಿತಪಡಿಸಿಕೊಳ್ಳುವುದು ಮುಂತಾದ ಧ್ಯೇಯೋದ್ದೇಶಗಳನ್ನು ಇದು ಹೊಂದಿದ್ದು, ಈ ಕೆಳಕಂಡಂತೆ ಕ್ರಮ ವಹಿಸಲಾಗಿರುತ್ತದೆ.

ವಿಧಿ-ವಿಧಾನ: ವಿದ್ಯಾರ್ಥಿಗಳನ್ನು ಮೂರು ವಿಧದ ಕಾಲ್ಪನಿಕ ಕಲಿಕಾ ಕೋಣೆಗಳಲ್ಲಿ ವಿಂಗಡಿಸಲಾಗಿತ್ತು. ತರಗತಿ ವಿಧ-1- ಯಾವುದೇ ತಂತ್ರಜ್ಞಾನ ಆಧಾರಿತ ಸಾಧನಗಳು ಇಲ್ಲದ (ಮೊಬೈಲ್ ರಹಿತ) ಮಕ್ಕಳ ತರಗತಿ. ತರಗತಿ ವಿಧ-2- ಇಂಟರ್ ನೆಟ್ ರಹಿತ ಮೊಬೈಲ್ ಫೋನ್ ಹೊಂದಿರುವ ತರಗತಿ. ತರಗತಿ ವಿಧ-3- ಇಂಟರ್ ನೆಟ್ ಸಹಿತ ಕಂಪ್ಯೂಟರ್/ಟ್ಯಾಬ್/ಸ್ಮಾರ್ಟ್ ಫೋನ್ ಹೊಂದಿರುವ ತರಗತಿ. ಪ್ರತಿ ಶಾಲೆಯ 20 ರಿಂದ 25 ಮಕ್ಕಳಿಗೆ ಒಬ್ಬ ಮಾರ್ಗದರ್ಶಿ ಶಿಕ್ಷಕರನ್ನು ನೇಮಿಸಿ ಕಾಲ್ಪನಿಕ ಕೋಣೆಯ ಉಸ್ತುವಾರಿ ವಹಿಸಲಾಗಿತ್ತು. ಶಾಲೆಯಲ್ಲಿರುವ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ ಕಲಿಕಾ ಕೋಣೆಯ ಮಕ್ಕಳ ಸಂಖ್ಯೆಯನ್ನು ಬದಲಿಸಲು ಅವಕಾಶ ಕಲ್ಪಿಸಲಾಗಿತ್ತು.

**ಮಾರ್ಗದರ್ಶನ ನೀಡಲು ಈ ಕೆಳಕಂಡ ಕ್ರಮಗಳನ್ನು ಅನುಸರಿಸಲಾಗಿದೆ.**

- ಮಾರ್ಗದರ್ಶಿ ಶಿಕ್ಷಕರು 'ನೆರೆಹೊರೆ' ಗುಂಪುವಾರು ಮಕ್ಕಳನ್ನು ಪ್ರತಿ ದಿನ ಅಥವಾ ಕನಿಷ್ಠ ವಾರಕ್ಕೆ ಒಂದು ದಿನವಾದರೂ ಕಡ್ಡಾಯವಾಗಿ ಭೇಟಿ ಮಾಡಿ ಮಕ್ಕಳಿಗೆ ಮುಂದಿನ ವಾರದ ವೇಳಾಪಟ್ಟಿಯನ್ನು ನೀಡಿ, ಮಕ್ಕಳು ಸ್ವಯಂ ಕಲಿಕೆಗೆ ಪೂರಕವಾಗಿ ಮಾರ್ಗದರ್ಶನ ನೀಡುವುದು. ಹಿಂದಿನ ವಾರದ ವೇಳಾಪಟ್ಟಿಯಂತೆ ಮಕ್ಕಳ ಕಲಿಕಾ ಪ್ರಗತಿಯನ್ನು ಅವಲೋಕಿಸಿ ಸಂದೇಹ ಅಥವಾ ಸಂಶಯಗಳಿದ್ದಲ್ಲಿ ಬಗೆಹರಿಸುವುದು.
- ಸ್ವಯಂಸೇವಕರು/ ಸರ್ಕಾರೇತರ ಸಂಸ್ಥೆಗಳು-ಪ್ರತಿಯೊಂದು ನೆರೆಹೊರೆ ಗುಂಪಿನ ಆ ಪ್ರದೇಶದಲ್ಲಿ ನಿವಾಸಿಯಾಗಿರುವ ವಿದ್ಯಾವಂತ ಯುವಕ/ಯುವತಿಯರನ್ನು ಗುರುತಿಸಿ ಸ್ವಯಂಸೇವಕರನ್ನಾಗಿ ನೇಮಿಸಿ ಸದರಿ ಸ್ವಯಂಸೇವಕರು ಮಾರ್ಗದರ್ಶಿ ಶಿಕ್ಷಕರ ಮೇಲ್ವಿಚಾರಣೆಯಲ್ಲಿ ನೆರೆಹೊರೆ ಗುಂಪಿನ ಮಕ್ಕಳಿಗೆ ಪಾಠ ಪ್ರವಚನ ಕೈಗೊಳ್ಳುವುದು. ತಮ್ಮ ವ್ಯಾಪ್ತಿಯಲ್ಲಿರುವ ಸ್ವಯಂ ಸೇವಾ ಸಂಸ್ಥೆಗಳ ಸಹಕಾರವನ್ನೂ ಸಹಾ ಪಡೆಯುವುದು.
- ನೆರೆಹೊರೆಯ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿ ಶಿಕ್ಷಕರ ಬಳಿ ಅಥವಾ ಸ್ವಯಂ ಸೇವಕರ ಬಳಿ ಲಭ್ಯವಿರುವ ತಂತ್ರಜ್ಞಾನಾಧಾರಿತ ಸಲಕರಣೆಗಳನ್ನು (ಸ್ಮಾರ್ಟ್ ಫೋನ್, ಲ್ಯಾಪ್‌ಟಾಪ್, ಇತ್ಯಾದಿ) ಬಳಸಿ ಮಕ್ಕಳು ಪರಿಕಲ್ಪನೆಗಳನ್ನು ಪರಿಣಾಮಕಾರಿಯಾಗಿ ಅರ್ಥೈಸಿಕೊಳ್ಳಲು ದೃಕ್-ಶ್ರವಣ (Audio Visual) ಮಾಧ್ಯಮದ ಮೂಲಕ ಕಲಿಸುವುದು.
- ಬಹುತೇಕ ಮೊಬೈಲ್ ಫೋನ್‌ಗಳು ಪೋಷಕರದ್ದಾಗಿದ್ದು, ಪೋಷಕರು ಸಾಮಾನ್ಯವಾಗಿ ಮನೆಯಲ್ಲಿ ಲಭ್ಯವಾಗುವ ಸಮಯದಲ್ಲಿ ಮಕ್ಕಳನ್ನು ಸಂಪರ್ಕಿಸಲು ಕ್ರಮವಹಿಸುವುದು.

- ವಿದ್ಯಾರ್ಥಿಗಳು ಆ ದಿನ ನೀಡಿರುವ ಚಟುವಟಿಕೆಗಳನ್ನು ಹಾಗೂ ಅಭ್ಯಾಸಗಳನ್ನು ಪೂರ್ಣಗೊಳಿಸಿರಬೇಕು ಮತ್ತು ಪೋಷಕರು ಮನೆಗೆ ಹಿಂತಿರುಗಿದ ನಂತರ ಮಾರ್ಗದರ್ಶಿ ಶಿಕ್ಷಕರು ಫೋನ್ ಮೂಲಕ ವಿದ್ಯಾರ್ಥಿಗಳೊಂದಿಗೆ ಮಾತನಾಡಿ ಗೊಂದಲ ಸಂಶಯಗಳನ್ನು ಬಗೆಹರಿಸಿ ಕಲಿಕೆಯನ್ನು ಖಚಿತಪಡಿಸಿಕೊಳ್ಳುವುದು.
- Voice Message ಗಳ ಮೂಲಕ ವಿದ್ಯಾರ್ಥಿಗಳಿಗೆ ಭಾಷಾ ವಿಷಯಗಳ ಬೋಧನೆಯಲ್ಲಿ ಪಠಣ ಮತ್ತು ಹಾಡುವಿಕೆ ಮೂಲಕ ಮಕ್ಕಳ ಗಮನವನ್ನು ಹೆಚ್ಚು ಸೆಳೆಯಬಹುದು.
- ಇಂಟರ್‌ನೆಟ್ ಸೌಲಭ್ಯವುಳ್ಳ ಸಾಧನಗಳನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿ ಶಿಕ್ಷಕರು ಜೂಮ್/ಸಿಸ್ಕೋ ವೆಬೆಕ್ಸ್/ ಗೂಗಲ್ ಕ್ಲಾಸ್ ರೂಂ ಮುಂತಾದ ಇಂಟರ್ ನೆಟ್ (ಆ್ಯಪ್)ಗಳನ್ನು ಬಳಸಿ ವಿಡಿಯೋ ಕಾನ್ಫರೆನ್ಸ್ ಬೋಧನೆ ಮಾಡುವುದು.
- ಕೇವಲ ತಂತ್ರಜ್ಞಾನದ ಮೇಲೆ ಅವಲಂಬಿತರಾಗದೇ ತರಗತಿ ನಂತರ ಸ್ವಯಂ ಕಲಿಕೆಗೆ ಪೂರಕವಾಗುವಂತಹ ಚಟುವಟಿಕೆಗಳಿಗೆ ಪ್ರಾಮುಖ್ಯತೆ ನೀಡುವುದು.
- ವಿದ್ಯಾರ್ಥಿಗಳಿಗೆ ನೀಡಿದ ಚಟುವಟಿಕೆಗಳ ಅನುಪಾಲನೆಯನ್ನು ಚೈಲ್ಡ್ ಪ್ರೋಫೈಲ್ (ಪ್ರತಿ ಮಗುವಿನ ಕಲಿಕಾ ಪ್ರಗತಿಯ ವೈಯಕ್ತಿಕ ಕಡತ) ನಲ್ಲಿ ದಾಖಲಿಸಿ ಇಡುವುದು.
- ಈ ಸಂದರ್ಭದಲ್ಲಿ ದೈಹಿಕ ಅಂತರವನ್ನು ಮತ್ತು ಎಲ್ಲಾ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಅನುಸರಿಸುವುದು.

**ವಿವಿಧ ಕಾಲ್ಪನಿಕ ಕೋಣೆಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ವಿವರಗಳು (ಸರ್ಕಾರಿ ಮತ್ತು ಅನುದಾನಿತ):**

| ಕ್ರ.ಸಂ | ಕಾಲ್ಪನಿಕ ಕೋಣೆಗಳ ವಿವರ | ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 01 | 1ನೇ ವಿಧ | 25,97,975 |
| 02 | 2ನೇ ವಿಧ | 13,14,860 |
| 03 | 3ನೇ ವಿಧ | 15,77,179 |
| | **ಒಟ್ಟು** | **54,90,024** |

2020-21ನೇ ಸಾಲಿನಲ್ಲಿ ವಿದ್ಯಾಗಮ ಕಾರ್ಯಕ್ರಮವು ಆಗಸ್ಟ ಮಾಹೆಯಿಂದ ಪ್ರಾರಂಭಿಸಿ ಅಕ್ಟೋಬರ್ 10 ರವರೆಗೂ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆ.

**ವಿದ್ಯಾಗಮ ಕಾರ್ಯಕ್ರಮದಿಂದ ಮಕ್ಕಳಿಗೆ ಆದ ಅನುಕೂಲಗಳು:**

- ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು 03 ಗುಂಪುಗಳನ್ನಾಗಿ ವಿಂಗಡಿಸಿರುವುದರಿಂದ ಮೊಬೈಲ್/ಇಂಟರ್ ನೆಟ್ ಸೌಲಭ್ಯವಿಲ್ಲದ ಬಡ ಮತ್ತು ಹಿಂದುಳಿದ ವಿದ್ಯಾರ್ಥಿಗಳಿಗೆ ಕಲಿಕೆಯ ನಿರಂತರತೆಯನ್ನು ಕಾಪಾಡಿಕೊಳ್ಳಲು ಸಹಾಯಕವಾಗಿದೆ.
- ಸ್ವಯಂ ಕಲಿಕೆಗೆ ಅನುಕೂಲವಾಗಿರುತ್ತದೆ. ಮಕ್ಕಳು ಅನಾವಶ್ಯಕವಾಗಿ ಕಾಲಹರಣ ಮಾಡುವುದು ತಪ್ಪಿಸಿದಂತಾಗುತ್ತದೆ.
- ಮಕ್ಕಳು ಶಾಲೆಯಿಂದ ಹೊರಗುಳಿಯದಂತೆ ತಡೆಯಲು ಸಹಕಾರಿಯಾಗಿದೆ.
- ಬಾಲ್ಯ ವಿವಾಹ ಮತ್ತು ಬಾಲಕಾರ್ಮಿಕ ಪ್ರಕರಣಗಳು ತಡೆಯಲು ಸಹಕಾರಿಯಾಗಿದೆ.
- ಪ್ರಸ್ತುತ ಕೋವಿಡ್ ಸಂದರ್ಭದಲ್ಲಿಯೂ ಮಕ್ಕಳು ಉತ್ಸಾಹದಿಂದ ಕಲಿಕೆಯಲ್ಲಿ ತೊಡಗಿದ್ದಾರೆ.
- ಮಕ್ಕಳ ಶೈಕ್ಷಣಿಕ ಪ್ರಗತಿಗೆ ಈ ಕಾರ್ಯಕ್ರಮವು ಪೂರಕವಾಗಿದೆ.
- ಶಿಕ್ಷಕ ಮತ್ತು ಮಕ್ಕಳ ನಡುವಿನ ಬಾಂಧವ್ಯ ಸೇತುವೆಯಾಗಿ ಯೋಜನೆ ನೆರವಾಗಿದೆ.
- ಮಕ್ಕಳು ಪಾಲಕರೊಂದಿಗೆ ಶಾಲಾ ಸಮಯಗಳಲ್ಲಿ ಕೆಲಸಗಳಿಗೆ ತೆರಳುವುದನ್ನು ತಪ್ಪಿಸಿದಂತಾಗುತ್ತದೆ.
- ಶಾಲಾ ಜನವಸತಿ ಪ್ರದೇಶದ ಸಮುದಾಯದೊಂದಿಗೆ ಸಮನ್ವಯ ಸಾಧಿಸಲು ಸಹಕಾರಿಯಾಗಿದೆ.

**ವಿದ್ಯಾಗಮ ಕಾರ್ಯಕ್ರಮದಿಂದ ಅನುಷ್ಠಾನದ ಸಮಯದಲ್ಲಿ ಕಂಡು ಬಂದ ತೊಂದರೆಗಳು:**

- ಗ್ರಾಮೀಣ ಭಾಗಗಳಲ್ಲಿ ಎಲ್ಲಾ ಮಕ್ಕಳಿಗೆ ಮಾಸ್ಕ ಮತ್ತು ಸ್ಯಾನಿಟೈಸರ್ ಒದಗಿಸುವುದು ಕಷ್ಟಕರವಾಗಿರುತ್ತದೆ.
- ಶಾಲಾ ಆವರಣದ ಹೊರಗೆ ಕಲಿಸುವ ಪ್ರಕ್ರಿಯೆ ಸವಾಲಿನದಾಗಿದೆ. ಕಲಿಕೆಗೆ ಸೂಕ್ತ ಸ್ಥಳಾವಕಾಶ ಕೊರತೆ, ಮೂಲಭೂತ ಸೌಲಭ್ಯಗಳ ಕೊರತೆ, ಕಪ್ಪು ಹಲಗೆ, ಬೋಧನೋಪಕರಣಗಳು ಇಲ್ಲದೇ ಕೋರ್ ವಿಷಯಗಳಾದ ಗಣಿತ, ವಿಜ್ಞಾನ, ಕಲಿಕೆಗೆ ತೊಂದರೆಯಾಗುತ್ತದೆ.

ಸಿಇತ. ಎಸ್. ಆ

- ಶಾಲೆ ಹೊರತಾದ ಸ್ಥಳಗಳಲ್ಲಿ ನಡೆಸುವುದರಿಂದ ಶಿಕ್ಷಕರು ಮಕ್ಕಳ ಮೇಲ್ವಿಚಾರಣೆ ಮಾಡುವುದರ ತೊಂದರೆ, ಮಕ್ಕಳಿಗೆ ಏಕಾಗ್ರತೆಯ ಭಂಗವಾಗುವುದು, ಕುಡಿಯುವ ನೀರು ಮತ್ತು ಶೌಚಾಲಯದ ಸಮರ್ಪಕ ವ್ಯವಸ್ಥೆಯ ಕೊರತೆ ಉಂಟಾಗುತ್ತದೆ.
- ನಗರ ಪ್ರದೇಶಗಳಲ್ಲಿ ಮತ್ತು ಜನಸಂದಣಿ ಇರುವ ಸ್ಥಳಗಳಲ್ಲಿ ಸದರಿ ಕಾರ್ಯಕ್ರಮ ಅನುಷ್ಠಾನಗೊಳಿಸುವುದು ಕಷ್ಟಕರವಾಗಿರುತ್ತದೆ.

**ವಿದ್ಯಾಗಮ ಕಾರ್ಯಕ್ರಮ ಕುರಿತು ಜಿಲ್ಲಾವಾರು ಒಟ್ಟಾರೆ ಅಭಿಪ್ರಾಯ:**

- ಶಾಲಾ ಅವರಣದಲ್ಲಿ ಎಸ್.ಒ.ಪಿ ಪ್ರಕಾರ ಪೂರ್ಣ ಪ್ರಮಾಣದಲ್ಲಿ ಶಿಕ್ಷಕರನ್ನು ತೊಡಗಿಸಿಕೊಂಡು ವಿದ್ಯಾಗಮ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ ಯಶಸ್ವಿಗೊಳಿಸಬಹುದಾಗಿದೆ.
- ಶಿಕ್ಷಕರು ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳಿರುವ ಸ್ಥಳಕ್ಕೆ ತೆರಳಿ ಶಿಕ್ಷಣ ನೀಡುವ ಈ ಕಾರ್ಯಕ್ರಮ ನಮ್ಮ ಕರ್ನಾಟಕ ರಾಜ್ಯಕ್ಕೆ ಸೀಮಿತವಾಗದೇ ಇಡೀ ರಾಷ್ಟ್ರಕ್ಕೆ ಮಾದರಿಯಾಗಿದೆ.
- ಎಸ್.ಎಸ್.ಎಲ್.ಸಿ ಪರೀಕ್ಷೆಯಂತೆಯೇ ವಿದ್ಯಾಗಮ ಕಾರ್ಯಕ್ರಮ ಮುಂಜಾಗ್ರತೆಯಿಂದ ಮುಂದುವರೆಸುವುದು ಸೂಕ್ತವಾಗಿರುತ್ತದೆ.
- ಗ್ರಾಮೀಣ ಭಾಗದಲ್ಲಿನ ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ವರದಾನವಾಗಿದೆ.
- ಆನ್ ಲೈನ್ ಶಿಕ್ಷಣದಿಂದ ವಂಚಿತರಾದ ಮಕ್ಕಳಿಗೆ ವಿದ್ಯಾಗಮ ಕಾರ್ಯಕ್ರಮ ತುಂಬ ಉತ್ತಮವಾಗಿದೆ.
- ಒಟ್ಟಾರೆಯಾಗಿ ಈ ಕಾರ್ಯಕ್ರಮವು ಮಕ್ಕಳ ಕಲಿಕೆಗೆ ಪೂರಕವಾಗಿದೆ.
- ಇಲಾಖೆ ಹಾಗೂ ಶಿಕ್ಷಕರ ಬಗ್ಗೆ ಪೋಷಕರಲ್ಲಿ ಒಳ್ಳೆಯ ಭಾವನೆ ಮೂಡಿಸಿದೆ.

ಹಲವು ಶಿಕ್ಷಕರು ಕೋವಿಡ್-19 ಸೋಂಕಿಗೆ ಒಳಗಾದ ಕಾರಣ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಿದ್ಯಾಗಮ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಲಾಗಿತ್ತು.

ಮೇಲೆ ಓದಲಾದ ಉಲ್ಲೇಖ (1)ರ ಘನ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ದಾಖಲಾದ WP 11708/2020 (EDN-RES-PIL) ಕುರಿತು ದಿ:4-12-2020 ರಂದು ನೀಡಿರುವ ಮಧ್ಯಂತರ ಆದೇಶದ ಅಂಶಗಳು:

> We have heard learned counsel for the petitioners and learned Additional Government Advocate for the State and perused the material on record.
>
> This petition is filed in public interest. The main grievance of the petitioners is with regard to providing educational facilities to the children, particularly having regard to Article 21-A of the Constitution and the Right to Education Act, 2009 ("RTE Act, 2009" for short) particularly during the period of the COVID-19pandemic.
>
> **In the circumstances, we direct the respondent/State to assess the status of COVID-19 in the State and to take a decision as to whether "VIDYAGAMA" could be re-commenced as it is a programme for those students who do not have the facility of technology or internet, particularly in the rural and semi-urban areas. The consideration with regard to re-commencement of "VIDYAGAMA" shall be made within a period of ten days from today.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 172 ಪಿಜಿಸಿ 2020, ಬೆಂಗಳೂರು ದಿನಾಂಕ: 15-12-2020**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಕಲಿಕಾ ಹಿತದೃಷ್ಟಿಯಿಂದ ಹಾಗೂ ಶೈಕ್ಷಣಿಕ ಪ್ರಗತಿಗಾಗಿ ರಾಜ್ಯದಲ್ಲಿನ ಎಲ್ಲಾ ಮಕ್ಕಳಿಗೆ ಕೋವಿಡ್-19ರ ಹಿನ್ನೆಲೆಯಲ್ಲಿ ಶಾಲೆಗಳು ತೆರೆಯದಿರುವುದರಿಂದ ವಿದ್ಯಾಗಮ

ಹೆಚ್. ಎಸ್. ಶಿ

ಕಾರ್ಯಕ್ರಮವನ್ನು ಪುನರಾರಂಭಿಸಲು ರೂಪುರೇಷೆಗಳನ್ನು ನಿಗದಿಪಡಿಸುವ ಬಗ್ಗೆ ಈ ಕೆಳಕಂಡಂತೆ ವೇಳಾ ಪಟ್ಟಿಯನ್ನು ಸಲಹಾತ್ಮಕವಾಗಿ ನಿಗಧಿಪಡಿಸಲಾಗಿದ್ದು, ವಿದ್ಯಾಗಮ ಕಾಯಕ್ರಮವನ್ನು ಪುನರಾರಂಭಿಸಲು ಈ ಕೆಳಕಂಡ ಮಾಗದರ್ಶಿ ನಿರ್ದೇಶನಗಳನ್ನು ನೀಡಲಾಗಿದೆ. ಆಯಾ ಶಾಲೆಯಲ್ಲಿರುವ ಶಿಕ್ಷಕರ ಸಂಖ್ಯೆ, ಮಕ್ಕಳ ಸಂಖ್ಯೆ ಹಾಗೂ ಕೊಠಡಿ/ಸ್ಥಳಾವಕಾಶವನ್ನು ಆಧರಿಸಿ ಸ್ಥಳೀಯವಾಗಿ ಬದಲಾವಣೆ ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಿ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರಲು ಸೂಚಿಸಿದೆ. ಒಟ್ಟಿನಲ್ಲಿ ವಿದ್ಯಾಗಮ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲಾ ಅಗತ್ಯ ಮುಂಜಾಗ್ರತೆ ಹಾಗೂ ಸುರಕ್ಷತಾ ಕ್ರಮಗಳನ್ನು ಅನುಸರಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಆದೇಶಿಸಿದೆ.

- ವಿದ್ಯಾಗಮ ಕಾರ್ಯಕ್ರಮವನ್ನು ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಖಾಸಗಿ ಶಾಲೆಯವರು ಆಯಾ ಶಾಲಾ ಆವರಣದಲ್ಲಿ ನಡೆಸುವುದು.
- ಈಗ ಅನುಸರಿಸುತ್ತಿರುವ ಆನ್ ಲೈನ್/ಇತರೆ ಪರ್ಯಾಯ ವಿಧಾನವನ್ನು ಮುಂದುವರೆಸಿಕೊಂಡು ಹೋಗಬೇಕು/ ಒದಗಿಸುವುದು.
- ಆನ್ ಲೈನ್ ವಿಧಾನದ ಮೂಲಕ ತಲುಪಲು ಸಾಧ್ಯವಿಲ್ಲದ ವಿದ್ಯಾರ್ಥಿಗಳನ್ನು ಪ್ರತಿ ದಿನ ಅರ್ಧ ದಿನಕ್ಕೆ ಶಾಲೆಗಳಿಗೆ ಕರೆಸಿ ಮಾರ್ಗದರ್ಶನ ನೀಡುವುದು.
- ಪ್ರಸ್ತುತ ಚಾಲ್ತಿಯಲ್ಲಿರುವ ಎಂ.ಹೆಚ್.ಎ. ಮತ್ತು ಕೇಂದ್ರ ಶಿಕ್ಷಣ ಮಂತ್ರಾಲಯದ ಮಾರ್ಗಸೂಚಿಗಳ ಅನುಸಾರ ಪೋಷಕರ ಸಹಮತಿ ಮೇರೆಗೆ ಮಾತ್ರ ವಿದ್ಯಾರ್ಥಿಗಳು ಶಾಲೆಗಳಿಗೆ ಹಾಜರಾಗಲು ಸಾಧ್ಯವಿರುವುದರಿಂದ,ಪೋಷಕರ ಲಿಖಿತ ಒಪ್ಪಿಗೆಯನ್ನು ಪಡೆದುಕೊಂಡು ಶಾಲಾ ಆವರಣದಲ್ಲಿ ವಿದ್ಯಾಗಮ ಕಾರ್ಯಕ್ರಮಕ್ಕೆ ಹಾಜರಾಗಲು ಅವಕಾಶ ಕಲ್ಪಿಸುವುದು.
- ಪ್ರತಿ ಶಾಲೆಯಲ್ಲಿ ಮಕ್ಕಳನ್ನು ಥರ್ಮಲ್ ಸ್ಕ್ಯಾನರ್ ಮೂಲಕ ಪರೀಕ್ಷಿಸುವುದು.
- ಜ್ವರ, ಕೆಮ್ಮು, ನೆಗಡಿ ಇತ್ಯಾದಿ ಲಕ್ಷಣಗಳಿರುವ ಅಥವಾ ಕೋವಿಡ್-19 ಲಕ್ಷಣಗಳಿರುವ ವಿದ್ಯಾರ್ಥಿಗಳು ಸದರಿ ವಿದ್ಯಾಗಮ ಕಾರ್ಯಕ್ರಮಕ್ಕೆ ಹಾಜರಾಗುವಂತಿಲ್ಲ.
- ಪ್ರತಿ ವಿದ್ಯಾರ್ಥಿ ಮಾಸ್ಕ್ ಧರಿಸುವುದು ಹಾಗೂ ಭೌತಿಕ ಅಂತರವನ್ನು ಕಾಪಾಡಿಕೊಳ್ಳುವುದು ಕಡ್ಡಾಯ.
- SOP ಅನುಸಾರ ಶಾಲೆಗಳಲ್ಲಿ ಸ್ಯಾನಿಟೈಸರ್/ಸೋಪ್, ಇತರೆ ನೈರ್ಮಲೀಕರಣ ವ್ಯವಸ್ಥೆ ಮಾಡಬೇಕು
- ಸರ್ಕಾರಿ ಶಾಲೆಗಳಲ್ಲಿನ ವಿದ್ಯಾರ್ಥಿಗಳು ತಾವು ಪ್ರಸ್ತುತ ಬೇರೆ ಸ್ಥಳದಲ್ಲಿ ವಾಸವಿದ್ದಲ್ಲಿ, ವಾಸವಿರುವ ಸ್ಥಳದಲ್ಲಿನ ಯಾವುದೇ ಹತ್ತಿರದ ಸರ್ಕಾರಿ ಶಾಲೆಗಳ ಆವರಣದಲ್ಲಿ ನಡೆಯುವ ವಿದ್ಯಾಗಮ ಕಾರ್ಯಕ್ರಮಕ್ಕೆ ಹಾಜರಾಗಬಹುದು.
- ವಿದ್ಯಾರ್ಥಿಗಳನ್ನು ಶಾಲೆಯಲ್ಲಿ ಇರುವ ಶಿಕ್ಷಕರ ಸಂಖ್ಯೆ ಮತ್ತು ತರಗತಿ ಕೊಠಡಿಗಳ ಸಂಖ್ಯೆ ಅನುಸಾರ ತಂಡಗಳನ್ನಾಗಿ ವಿಭಾಗಿಸುವುದು. ಶಿಕ್ಷಕರ ಸಂಖ್ಯೆಯಷ್ಟು ತಂಡಗಳನ್ನು ಮಾಡಬಹುದು ಮತ್ತು ಪ್ರತೀ ತಂಡದಲ್ಲಿ ಗರಿಷ್ಠ 15-20 ವಿದ್ಯಾರ್ಥಿಗಳು ಇರಬಹುದು, ಶಾಲೆಯಲ್ಲಿ ಶಿಕ್ಷಕರ ಸಂಖ್ಯೆಯಷ್ಟು ತರಗತಿ ಕೊಠಡಿಗಳು ಲಭ್ಯವಿಲ್ಲದೇ ಇದ್ದಲ್ಲಿ ಪ್ರಯೋಗಾಲಯ, ವಾಚನಾಲಯ, ವರಾಂಡಗಳಲ್ಲಿ ವ್ಯವಸ್ಥೆ ಮಾಡಬಹುದು.
- ಮಕ್ಕಳ ಸಂಖ್ಯೆ ಹೆಚ್ಚಿದ್ದು ಶಿಕ್ಷಕರ ಸಂಖ್ಯೆ ಕಡಿಮೆ ಇದ್ದಲ್ಲಿ ಮಕ್ಕಳನ್ನು ಮೇಲೆ ತಿಳಿಸಿರುವಂತೆ ತಂಡಗಳಲ್ಲಿ ವಿಂಗಡಿಸಿ ಶಾಲಾ ಆವರಣದಲ್ಲಿರುವ ಪ್ರತ್ಯೇಕ ಕೊಠಡಿ/ಸ್ಥಳಗಳಲ್ಲಿ ಕುಳ್ಳಿರಿಸಿ, ಶಿಕ್ಷಕರು ತಂಡದಿಂದ ತಂಡಕ್ಕೆ ತೆರಳಿ ಆಯಾ ವಿಷಯದ ಬೋಧನೆ/ಮಾರ್ಗದರ್ಶನ ಮಾಡುವುದು.
- ಗ್ರಾಮೀಣ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ಹಾಗೂ ನಗರ ಪ್ರದೇಶಗಳಲ್ಲಿ ನಗರ ಸಭೆ/ಪುರ ಸಭೆ ವತಿಯಿಂದ ಸರ್ಕಾರಿ ಶಾಲೆಗಳ ಸ್ವಚ್ಛತೆ ಹಾಗೂ ಸ್ಯಾನಿಟೈಸೇಷನ್ ವ್ಯವಸ್ಥೆ ಮಾಡಿಸುವುದು.
- ವಿದ್ಯಾರ್ಥಿಗಳು ಮನೆಯಿಂದಲೇ ಕುಡಿಯುವ ನೀರನ್ನು ತರಲು ತಿಳಿಸಬಹುದು
- ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರು ಹಾಗೂ ಶೌಚಾಲಯಗಳ ನೈರ್ಮಲ್ಯ ವ್ಯೆವಸ್ಥೆ ಮಾಡುವುದು.
- ಈ ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಸಹಕಾರವನ್ನು ಪಡೆಯುವುದು.
- ಯಾವುದಾದರೂ ವಿದ್ಯಾರ್ಥಿ/ಸಿಬ್ಬಂದಿ ಕೋವಿಡ್-19 ಪಾಸಿಟೀವ್ ಕಂಡುಬಂದಲ್ಲಿ ತಕ್ಷಣ ಆರೋಗ್ಯ ಇಲಾಖೆ ಸಂಪರ್ಕಿಸಿ ತುರ್ತು ಚಿಕಿತ್ಸೆಗೆ ವ್ಯವಸ್ಥೆ ಮಾಡುವುದು.
- ಕೋವಿಡ್ ಹಿನ್ನೆಲೆಯಲ್ಲಿ ಸದರಿ ಕಾರ್ಯಕ್ರಮದ ಮೇಲ್ವಿಚಾರಣೆ ಮತ್ತು ಉಸ್ತುವಾರಿಯ ನೇತೃತ್ವವನ್ನು ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಇವರು ನಡೆಸುವುದು.
- ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ) ಮತ್ತು ಇವರು ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.
- **ಮಾರ್ಗದರ್ಶನ ಅವಧಿ**: ಪ್ರತೀ ಅವಧಿ 45 ನಿಮಿಷಗಳದ್ದಾಗಿರಬಹುದು ಹಾಗೂ ಕಾರ್ಯಕ್ರಮವನ್ನು ಎರಡು ಪಾಳಿಗಳಲ್ಲಿ ನಡೆಸುವುದು.

  ಮೊದಲನೇ ಪಾಳಿ (ಪೂರ್ವಾಹ್ನ 10.00 ರಿಂದ 12.30): 10.00- 10.45 (ಮೊದಲನೇ ಅವಧಿ), 10.45 -11.30 ( ಎರಡನೇ ಅವಧಿ) 11.30-11.45 (ಬಿಡುವು) 11.45 – 12.30(ಮೂರನೇ ಅವಧಿ)

  ಎರಡನೇ ಪಾಳಿ (ಅಪರಾಹ್ನ 2.00 ರಿಂದ 4.30): 2.00-2.45(ಮೊದಲನೇ ಅವಧಿ), 2.45-3.30(ಎರಡನೇ ಅವಧಿ) 3.30 – 3.45( ಬಿಡುವು), 3.45-4.30 (ಮೂರನೇ ಅವಧಿ)

ಡಿ. ವಿ. ಡಿ

- **<u>ಪ್ರೌಢ ಶಾಲೆ ವಿದ್ಯಾರ್ಥಿಗಳಿಗೆ ವೇಳಾ ಪಟ್ಟಿ</u> :**

  <u>ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ</u>: ಸದರಿ ವಿದ್ಯಾರ್ಥಿಗಳು ಬೋರ್ಡ್ ಪರೀಕ್ಷೆ ಎದುರಿಸಬೇಕಾಗಿರುವುದರಿಂದ ಪ್ರತಿ ದಿನ ಮಾರ್ಗದರ್ಶನವನ್ನು ಮೊದಲನೇ ಪಾಳಿಯಲ್ಲಿ ನಡೆಸುವುದು.

| ದಿನ | ಅವಧಿ | ಪ್ರಥಮ ಭಾಷೆ | ದ್ವಿತೀಯ ಭಾಷೆ | ತೃತೀಯ ಭಾಷೆ | ಗಣಿತ | ವಿಜ್ಞಾನ | ಸಮಾಜ ವಿಜ್ಞಾನ | ದೈಹಿಕ ಶಿಕ್ಷಣ | ಇತರೆ(ವೃತ್ತಿ/ಚಿತ್ರಕಲೆ ಇತ್ಯಾದಿ) |
|---|---|---|---|---|---|---|---|---|---|
| ಸೋಮವಾರ | 10.00-10.45 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 | ತಂಡ 7 | ತಂಡ 8 |
| | 10.45 –11.30 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 | ತಂಡ 7 |
| | 11.45 – 12.30 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 |
| ಮಂಗಳವಾರ | 10.00-10.45 | ತಂಡ 6 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 |
| | 10.45 –11.30 | ತಂಡ 5 | ತಂಡ 6 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 |
| | 11.45 – 12.30 | ತಂಡ 4 | ತಂಡ 5 | ತಂಡ 6 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 |
| ಬುಧವಾರ | 10.00-10.45 | ತಂಡ 3 | ತಂಡ 4 | ತಂಡ 5 | ತಂಡ 6 | ತಂಡ 7 | ತಂಡ 8 | ತಂಡ 1 | ತಂಡ 2 |
| | 10.45 –11.30 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 | ತಂಡ 7 | ತಂಡ 8 | ತಂಡ 1 |
| | 11.45 – 12.30 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 | ತಂಡ 7 | ತಂಡ 8 |
| ಗುರುವಾರ | 10.00-10.45 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 | ತಂಡ 7 |
| | 10.45 –11.30 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 |
| | 11.45 – 12.30 | ತಂಡ 6 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 |
| ಶುಕ್ರವಾರ | 10.00-10.45 | ತಂಡ 5 | ತಂಡ 6 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 |
| | 10.45 –11.30 | ತಂಡ 4 | ತಂಡ 5 | ತಂಡ 6 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 |
| | 11.45 – 12.30 | ತಂಡ 3 | ತಂಡ 4 | ತಂಡ 5 | ತಂಡ 6 | ತಂಡ 7 | ತಂಡ 8 | ತಂಡ 1 | ತಂಡ 2 |
| ಶನಿವಾರ | 08.30-9.15 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 | ತಂಡ 7 | ತಂಡ 8 | ತಂಡ 1 |
| | 9.30-10.15 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 | ತಂಡ 7 | ತಂಡ 8 |
| | 10.30-11.15 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 | ತಂಡ 7 |

- **<u>8 ಮತ್ತು 9 ನೇ ತರಗತಿ</u>** ಮಕ್ಕಳನ್ನು ದಿನ ಬಿಟ್ಟು ದಿನ ಅಪರಾಹ್ನ 2.00 ರಿಂದ 4.30 ರವರೆಗೆ ಮಾರ್ಗದರ್ಶನವನ್ನು ಎರಡನೇ ಪಾಳಿಯಲ್ಲಿ ನಡೆಸುವುದು (ಸೋಮವಾರದಿಂದ ಶುಕ್ರವಾರದವರೆಗೆ ಮಾತ್ರ).
  2.00-2.45(ಮೊದಲನೇ ಅವಧಿ), 2.45-3.30(ಎರಡನೇ ಅವಧಿ), 3.30 – 3.45( ಬಿಡುವು), 3.45-4.30 (ಮೂರನೇ ಅವಧಿ)

| ದಿನ | ಅವಧಿ | ಪ್ರಥಮ ಭಾಷೆ | ದ್ವಿತೀಯ ಭಾಷೆ | ತೃತೀಯ ಭಾಷೆ | ಗಣಿತ | ವಿಜ್ಞಾನ | ಸಮಾಜ ವಿಜ್ಞಾನ | ದೈಹಿಕ ಶಿಕ್ಷಣ | ಇತರೆ(ವೃತ್ತಿ/ಚಿತ್ರಕಲೆ ಇತ್ಯಾದಿ) |
|---|---|---|---|---|---|---|---|---|---|
| ಸೋಮವಾರ (9ನೇ ತರಗತಿ) | 2.00-2.45 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 | ತಂಡ 7 | ತಂಡ 8 |
| | 2.45-3.30 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 | ತಂಡ 7 |
| | 3.45-4.30 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 |
| ಮಂಗಳವಾರ (8ನೇ ತರಗತಿ) | 2.00-2.45 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 | ತಂಡ 7 | ತಂಡ 8 |
| | 2.45-3.30 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 | ತಂಡ 7 |
| | 3.45-4.30 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 |
| ಬುಧವಾರ (9ನೇ ತರಗತಿ) | 2.00-2.45 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 |
| | 2.45-3.30 | ತಂಡ 6 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 |
| | 3.45-4.30 | ತಂಡ 5 | ತಂಡ 6 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 |
| ಗುರುವಾರ (8ನೇ ತರಗತಿ) | 2.00-2.45 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 | ತಂಡ 6 |
| | 2.45-3.30 | ತಂಡ 6 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 | ತಂಡ 5 |
| | 3.45-4.30 | ತಂಡ 5 | ತಂಡ 6 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 |
| ಶುಕ್ರವಾರ (9ನೇ ತರಗತಿ) | 2.00-2.45 | ತಂಡ 5 | ತಂಡ 6 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 | ತಂಡ 4 |
| | 2.45-3.30 | ತಂಡ 4 | ತಂಡ 5 | ತಂಡ 6 | ತಂಡ 7 | ತಂಡ 8 | ತಂಡ 1 | ತಂಡ 2 | ತಂಡ 3 |
| | 3.45-4.30 | ತಂಡ 3 | ತಂಡ 4 | ತಂಡ 5 | ತಂಡ 6 | ತಂಡ 7 | ತಂಡ 8 | ತಂಡ 1 | ತಂಡ 2 |

ವಿದ್ಯಾರ್ಥಿಗಳ ಕಲಿಕೆಗೆ ಪ್ರಸ್ತುತ ಪ್ರಸಾರ ಮಾಡುತ್ತಿರುವ 'ಸಂವೇದ' ದೂರದರ್ಶನ ಪಾಠಗಳ ಮೂಲಕ ಹೆಚ್ಚುವರಿ ಬೆಂಬಲವನ್ನು ಒದಗಿಸುವುದು.

**ಪ್ರಾಥಮಿಕ ಶಾಲೆಗಳ ವೇಳಾಪಟ್ಟಿ**

- **ಕೇವಲ 1 ರಿಂದ 5ನೇ ತರಗತಿ ಇರುವಂಥ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ :**

1 ರಿಂದ 3 ನೇ ತರಗತಿ ಮಕ್ಕಳನ್ನು ಹಾಗೂ 4 ಮತ್ತು 5ನೇ ತರಗತಿ ಮಕ್ಕಳನ್ನು ಪರ್ಯಾಯ ದಿನಗಳಂದು ಕರೆಸುವುದು (ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ ಪ್ರತೀ ತಂಡಕ್ಕೆ 15 ರಿಂದ 20 ಮಕ್ಕಳ ತಂಡಗಳನ್ನು ರಚಿಸುವುದು)

| **ದಿನ** | **ಅವಧಿ** | **ವಿಷಯ** |
|---|---|---|
| ಸೋಮವಾರ | 10.00-10.45 | ಗಣಿತ |
| (1 ರಿಂದ 3ನೇ ತರಗತಿ) | 10.45 –11.30 | ಪರಿಸರ ಅಧ್ಯಯನ |
| | 11.45 – 12.30 | ಭಾಷೆ-2 |
| ಮಂಗಳವಾರ | 10.00-10.45 | ಗಣಿತ |
| (4 & 5 ನೇ ತರಗತಿ) | 10.45 –11.30 | ಪರಿಸರ ಅಧ್ಯಯನ |
| | 11.45 – 12.30 | ಭಾಷೆ-2 |
| ಬುಧವಾರ | 10.00-10.45 | ಗಣಿತ |
| (1 ರಿಂದ 3ನೇ ತರಗತಿ) | 10.45 –11.30 | ಭಾಷೆ-1 |
| | 11.45 – 12.30 | ಪರಿಸರ ಅಧ್ಯಯನ |
| ಗುರುವಾರ | 10.00-10.45 | ಗಣಿತ |
| (4 & 5 ನೇ ತರಗತಿ) | 10.45 –11.30 | ಭಾಷೆ-1 |
| | 11.45 – 12.30 | ಪರಿಸರ ಅಧ್ಯಯನ |
| ಶುಕ್ರವಾರ | 10.00-10.45 | ಭಾಷೆ-2 |
| (1 ರಿಂದ 3ನೇ ತರಗತಿ) | 10.45 –11.30 | ಗಣಿತ |
| | 11.45 – 12.30 | ಭಾಷೆ-1 |
| ಶನಿವಾರ | 08.30-9.15 | ಭಾಷೆ-2 |
| (4 & 5 ನೇ ತರಗತಿ) | 9.30-10.15 | ಗಣಿತ |
| | 10.30-11.15 | ಭಾಷೆ-1 |

- **1 ರಿಂದ 7/8 ನೇ ತರಗತಿ ಇರುವಂಥ ಪ್ರಾಥಮಿಕ ಶಾಲೆಗಳಲ್ಲಿ** :

1 ರಿಂದ 5 ನೇ ತರಗತಿ ಮಕ್ಕಳನ್ನು ಮತ್ತು 6 ರಿಂದ 8ನೇ ತರಗತಿ ಮಕ್ಕಳನ್ನು ಪರ್ಯಾಯದಿನಗಳಂದು ಕರೆಸಿ ವಿದ್ಯಾಗಮ ನಡೆಸುವುದು. ಪ್ರತೀ ತಂಡಕ್ಕೆ 15 ರಿಂದ 20 ಮಕ್ಕಳ ತಂಡಗಳನ್ನು ರಚಿಸುವುದು, ಪ್ರತಿಯೊಬ್ಬ ಶಿಕ್ಷಕರು ಒಂದು ತಂಡದ ಮಕ್ಕಳಿಗೆ ಪ್ರತೀ ಅವಧಿಯಲ್ಲಿ ಬೋಧನೆ ಮಾಡುವುದು.

| **ದಿನ** | **ಅವಧಿ** | **ವಿಷಯ** |
|---|---|---|
| ಸೋಮವಾರ | 10.00-10.45 | ಗಣಿತ |
| (1 ರಿಂದ 5ನೇ ತರಗತಿ) | 10.45 –11.30 | ಪರಿಸರ ಅಧ್ಯಯನ |
| | 11.45 – 12.30 | ಭಾಷೆ-2 |
| ಮಂಗಳವಾರ | 10.00-10.45 | ಭಾಷೆ-1 |
| (6 ರಿಂದ 8 ನೇ ತರಗತಿ) | 10.45 –11.30 | ಗಣಿತ |
| | 11.45 – 12.30 | ಸಮಾಜ ವಿಜ್ಞಾನ |
| ಬುಧವಾರ | 10.00-10.45 | ಗಣಿತ |
| (1 ರಿಂದ 5ನೇ ತರಗತಿ) | 10.45 –11.30 | ಭಾಷೆ-1 |
| | 11.45 – 12.30 | ಪರಿಸರ ಅಧ್ಯಯನ |
| ಗುರುವಾರ | 10.00-10.45 | ಭಾಷೆ-2 |
| (6 ರಿಂದ 8 ನೇ ತರಗತಿ) | 10.45 –11.30 | ವಿಜ್ಞಾನ |
| | 11.45 – 12.30 | ಗಣಿತ |
| ಶುಕ್ರವಾರ | 10.00-10.45 | ಭಾಷೆ-2 |
| (1 ರಿಂದ 5ನೇ ತರಗತಿ) | 10.45 –11.30 | ಗಣಿತ |
| | 11.45 – 12.30 | ಭಾಷೆ-1 |

| | | |
|---|---|---|
| ಶನಿವಾರ<br>(6 ರಿಂದ 8 ನೇ ತರಗತಿ) | 08.30-9.15 | ಭಾಷೆ-3 |
| | 9.30-10.15 | ಸಮಾಜ ವಿಜ್ಞಾನ |
| | 10.30-11.15 | ವಿಜ್ಞಾನ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ

ಹೆಚ್. ಎಸ್. ಶಿ

(ಹೆಚ್.ಎಸ್. ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ.

ಇವರಿಗೆ,

1. ಮಹಾಲೇಖಪಾಲರು, (ಆಡಿಟ್ 1 & 2) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲೆಗಳ ಅಧ್ಯಕ್ಷರು, ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರ, ಜಿಲ್ಲಾಧಿಕಾರಿಗಳ ಕಛೇರಿ.
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲುಬುರಗಿ/ಧಾರವಾಡ.
5. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಬೆಂಗಳೂರು
6. ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಸ್ಥೆ, ಬೆಂಗಳೂರು.
7. ಎಲ್ಲಾ ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ (ಆಯುಕ್ತರ ಮುಖಾಂತರ)
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.